ಸಾರ್ವಜನಿಕ ಹಿತ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಕಳೆದ ಒಂದೆರಡು ವರ್ಷಗಳಿಂದ ಸಹಕಾರಿ ಸಂಘಗಳಿಗೆ ಸಲ್ಲಬೇಕಾದಂಥ, ರಾಜ್ಯ ಸರ್ಕಾರದವರು ಕೊಡಬೇಕಾದಂಥ ಸಬ್ಸಿಡಿ ಕೊಟ್ಟಿಲ್ಲವೆಂದು ತಾವು ಚೆನ್ನಾಗಿ ಅರ್ಥವಾಗುವಂಥ ರೀತಿಯಲ್ಲಿ ಹೇಳಿದ್ದೀರಿ. ನಾನು ಇಷ್ಟು ತಮಗೆ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿದ್ದಾರೆ, ಹಣಕಾಸಿನ ಇಲಾಖೆ ಅವರಲ್ಲಿ ಇದೆ. ಮುಂದಿನ ಅಧಿವೇಶನದಲ್ಲಿ ಮತ್ತೆ ಈ ವಿಚಾರ ಪ್ರಸ್ತಾಪ ಮಾಡಲಿಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ; ಅದಷ್ಟು ಬೇಗ ಇತ್ಯರ್ಥ ಮಾಡುತ್ತೇನೆನ್ನುವ ಭರವಸೆಯನ್ನು ಕೊಡಲಿಕ್ಕೆ ತಯಾರಿದ್ದೇನೆ. ಮತ್ತೊಂದು ವಿಚಾರವನ್ನು ಹೇಳುವುದಾದರೆ ಅಕ್ರಮವಾಗಿ ದಾಸ್ತಾನು ಮಾಡತಕ್ಕಂಥದ್ದು, ಕಳ್ಳಸಾಗಾಣಿಕೆ ಮಾಡತಕ್ಕಂಥದ್ದು, ಕಲಬೆರಕೆ ಮಾಡತಕ್ಕಂಥದ್ದು ಏನಿದೆ ಇದು ಬಹುಶಃ ನಮ್ಮ ಸಮಾಜದ ದುರ್ದೈವ. ಇವತ್ತು ಸಾಮಾಜಿಕ ನೈತಿಕ ಮತ್ತು ರಾಷ್ಟ್ರೀಯ ಮೌಲ್ಯಗಳು ಕುಸಿಯುತ್ತಿವೆ ಎನ್ನುವುದಕ್ಕೆ ಇವೆಲ್ಲಾ ನಿದರ್ಶನಗಳಾಗಿವೆ. ಇವತ್ತು ಕಳ್ಳಸಾಗಾಣಿಕೆ ಅಕ್ರಮ ದಾಸ್ತಾನು, ಕಲಬೆರಕೆ ಈ ದೇಶಕ್ಕೆ ಒಂದು ಕಂಠಕಪ್ರಾಯವಾಗಿದೆ ಎನ್ನುವುದನ್ನು ನಾವೆಲ್ಲಾ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದ ಸಂಬಂಧಪಟ್ಟ ಎಲ್ಲಾ ಇಲಾಖೆಯವರಿಗೆ ಇವತ್ತು ನಾನು ಆದೇಶ ಕೊಟ್ಟಿದ್ದೇನೆ. ಯಾರು ಅಕ್ರಮವಾಗಿ ದಾಸ್ತಾನು ಮಾಡಿರುತ್ತಾರೆ, ಕಲಬೆರಕೆ ಮಾಡುತ್ತಾರೆ ಸಾಗಾಣಿಕೆ ಮಾಡುತ್ತಾರೆ ಅಂಥವರ ವಿರುದ್ಧ ಕಟ್ಟುನಿಟ್ಟಾದ ರೀತಿಯಲ್ಲಿ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಮತ್ತು ಅಧಿಕಾರಿಗಳು ಯಾರು ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ ಅವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಬಿಗಿಯಾದ ವ್ಯವಸ್ಥೆ ಮಾಡುತ್ತಿದ್ದೇನೆ. ಬಹುಶಃ ಆಹಾರ ಧಾನ್ಯಗಳ ಸಾಕಾಣಿಕೆ ವಿಚಾರದಲ್ಲಿ ಸಹಕಾರಿ ಸಂಘಗಳಲ್ಲಿರತಕ್ಕಂಥದ್ದು ಮತ್ತು ವಿತರಣೆ ಮಾಡತಕ್ಕಂಥದ್ದರಲ್ಲಿ ವ್ಯವಸ್ಥೆ ಏನಿದೆ ಅದೆಲ್ಲವನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ದಸೆಯಲ್ಲಿ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ

ಮಾನ್ಯ ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ·

ವಿಷಯ :– ಕಾವೇರಿ ನೀರಿನ ಬಗ್ಗೆ.

† ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ಬಗ್ಗೆ ಇವತ್ತು ಪತ್ರಿಕೆಯಲ್ಲಿ 'ರಾಜ್ಯದ ತೀರ್ಮಾನ ಪುನರ್ ಪರಿಶೀಲನೆ' ಎಂದು ಬಂದಿದೆ.ಹಿಂದೆ ನೀರನ್ನು ಕೊಡುವುದಿಲ್ಲವೆಂದು ಹೇಳಿದ್ದರು. ಕರ್ನಾಟಕದ ಜನ ನಾವು ಕತ್ತಲೆಯಲ್ಲಿದ್ದೇವೆ ಕಾವೇರಿ ನೀರಿನ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದ್ದೀರಿ. ನ್ಯಾಯ ಮಂಡಲಿಯವರು ಒಂದು ರೀತಿ ಹೇಳುತ್ತಿದ್ದಾರೆ, ನಿಮಗೆ ಸಲಹೆ ಕೊಡುತ್ತಿದ್ದಾರೆ. ಇದು ಯಾವಾಗ ತೀರ್ಮಾನವಾಗುತ್ತದೆನ್ನುವುದು ನಮಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ತಮ್ಮ ನಿಲುವು ಏನೆಂಬುದು ಸರ್ಕಾರದ ನಿಲುವು ಏನುಎಂಬುದನ್ನು ತಿಳಿಸಬೇಕು ತಮಿಳುನಾಡಿಗೆ ನೀರನ್ನು ಕೊಡುತ್ತೀರೋ ಇಲ್ಲವೋ ತಿಳಿಸಬೇಕು. ನಿನ್ನೆ ಇಲ್ಲವೆಂದು ಬಂದಿತ್ತು, ಇವತ್ತು ಕೊಡುತ್ತೇವೆಂದು ಬಂದಿದೆ. ಇದು ಬಹಳ ಗಹನವಾದ ವಿಚಾರ. ದಯಮಾಡಿ ಇದರ ಬಗ್ಗೆ ಒಂದು ಪರಿಣಾಮಕಾರಿಯಾದ ತೀರ್ಮಾನವನ್ನು ಅಥವಾ ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಡಬೇಕು ಎಂದು ಅತ್ಯಂತ ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು :– ಗಮನ ಸೆಳೆಯುವ ಸೂಚನೆ, ಶ್ರೀ ಡಿ. ಬಿ. ಚಂದ್ರೇಗೌಡ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ತಮಗೆ ಗೊತ್ತಿಲ್ಲವೇ, ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಏತಕ್ಕೆ ಎದ್ದುನಿಂತಿದ್ದೇನೆನ್ನುವುದು ತಮಗೆ ಗೊತ್ತಾಗುತ್ತದೆ. ಇದರಲ್ಲಿ ಬಹಳ ಮುಖ್ಯವಾದಂಥ ದ್ವಂದ್ವಗಳಿದೆ. ಆದಕ್ಕಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡುತ್ತಿದ್ದಾರೆ ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ.....

ಅಧ್ಯಕ್ಷರು :– ಇದರಲ್ಲಿ ದ್ವಂದ್ವ ಎಲ್ಲಿ ಬಂತು. ಆವತ್ತು ಅವರು ಪೆನ್ಸಿಲ್ ತೋರಿಸಿಬಿಟ್ಟು ನೆಟ್ಟಗೆ ಇದೆ ಎಂದು ಹೇಳಿದರು.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ 5 ಟಿ.ಎಂ.ಸಿ. ನೀರು ಬಿಡುವುದಿಲ್ಲ ಎಂದು ಇದೆ. ಬಹಳ ಮುಖ್ಯವಾದ ವಿಚಾರವೇನೆಂದರೆ,

ಅಧ್ಯಕ್ಷರು :– ಮುಖ್ಯವಾದ ವಿಚಾರವೇನೋ ಸರಿ. ಆದರೆ ಅವರು ನೀರನ್ನು ಬಿಡುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ನೀವು ದ್ವಂದ್ವ ಏಕೆ ಕಲ್ಪಿಸುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ :– ಇವತ್ತು ಬೇರೆ ವಿಚಾರ ಬಂದಿದೆ. ಕಾವೇರಿ ವಾಟರ್ ಟ್ರಿಬ್ಯುನಲ್‌ನವರು

ಅಧ್ಯಕ್ಷರು :– ಟ್ರಿಬ್ಯುನಲ್ ಬಗ್ಗೆ ಬೇಕಾದಷ್ಟು ತಮಿಳುನಾಡಿನವರು ಹೇಳುತ್ತಾರೆ, ಮತ್ತೊಬ್ಬರು ಹೇಳುತ್ತಾರೆ, ಮಗದೊಬ್ಬರು ಹೇಳುತ್ತಾರೆ, ಆದರೆ ನಮ್ಮ ಸರ್ಕಾರದವರ ಧೋರಣೆ ಈ ಸದನದ ಮುಂದೆ ಸ್ಪಷ್ಟವಾಗಿದೆ. ಆದ್ದರಿಂದ ದ್ವಂದ್ವಕ್ಕೆ ಎಡೆಇಲ್ಲ

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಹಿಂದಿನ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆಯುತ್ತೇವೆಂದು ಹೇಳಿ ಇವತ್ತಿನವರೆವಿಗೂ ಕರೆದಿಲ್ಲ. ನಾವು ಡಾರ್ಕ್‌ನಲ್ಲಿದ್ದೇವೆ.

ಅಧ್ಯಕ್ಷರು :– ಸೋಮವಾರ ಮೀಟಿಂಗ್ ಕರೆದಿದ್ದಾರೆ. ಆವತ್ತಿನಿಂದ ಇವತ್ತಿನವರೆಗೆ ನೀರನ್ನು ಬಿಟ್ಟಿಲ್ಲ ಸೋಮವಾರದವರೆಗೂ ಬಿಡುವುದಿಲ್ಲ. ಸಮಾಧಾನವಾಯಿತೇ.

ಗಮನ ಸೆಳೆಯುವ ಸೂಚನೆ

ವಿಷಯ :– ರಾಜ್ಯದಲ್ಲಿ ಅಬಕಾರಿ ತೆರಿಗೆಯ ಹೆಚ್ಚಳದಿಂದ ಉಂಟಾಗಿರುವ ಪರಿಸ್ಥಿತಿ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಿಯಮ 72ರ ಪ್ರಕಾರ ರಾಜ್ಯದಲ್ಲಿ ಅಬಕಾರಿ ತೆರಿಗೆಯ ಹೆಚ್ಚಳದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1990–91ರ ಸಾಲಿಗೆ ಹೊರ ರಾಜ್ಯಕ್ಕೆ ರಫ್ತು ಮಾಡುವ ರಫ್ತು ಶುಲ್ಕವಲ್ಲದೆ ಬೇರೆ ಯಾವುದೇ ರೀತಿಯ ಅಬಕಾರಿ ಶುಲ್ಕವನ್ನು ಹೆಚ್ಚಿಸಿಲ್ಲ. ಹೊರರಾಜ್ಯಕ್ಕೆ ರಫ್ತು ಶುಲ್ಕವನ್ನು ರೂ. 1–00 ರಿಂದ ರೂ. 20–00ಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು ಹೊರ ರಾಜ್ಯಗಳಿಗೆಂದು ಸಾಗಿಸುತ್ತಿದ್ದ ಮದ್ಯವನ್ನು ನಮ್ಮ ರಾಜ್ಯದಲ್ಲಿಯೇ ಮಾರಾಟ ಮಾಡುತ್ತಿದ್ದುದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ನಷ್ಟವಾಗುತ್ತಿದ್ದುದರಿಂದ ಈ ಕ್ರಮವನ್ನು ತೆಗೆದುಕೊಳ್ಳಲಾಯ್ತು.

ಇತಹ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕರ್ನಾಟಕ ರಾಜ್ಯ ಸಂಸ್ಥೆಯಾದ ಎಂ.ಎಸ್.ಐ.ಎಲ್. ಮೂಲಕ ಮದ್ಯ ಸರಬರಾಜನ್ನು ಮಾಡಲು ಉದ್ದೇಶಿಸಿತು. ಆದರೆ ಭಾರತದ ಸರ್ವೋಚ್ಚ ನ್ಯಾಯಾಲಯವು ಸರ್ಕಾರ ಈ ಬಗ್ಗೆ ಹೊರಡಿಸಿದ ನೋಟಿಫಿಕೇಶನ್‌ಗಳಿಗೆ ತಡೆಯಾಜ್ಞೆ ಕೊಟ್ಟಿದ್ದುದರಿಂದ ಹೊರ ರಾಜ್ಯಗಳಿಗೆ ರಫ್ತು ಮಾಡುವ ಶುಲ್ಕವನ್ನು ರೂ. 1 ರಿಂದ 20 ಕ್ಕೆ ಹೆಚ್ಚಿಸಿ, ಹೊರರಾಜ್ಯಗಳಿಗೆಂದು ರಾಜ್ಯದಲ್ಲಿಯೇ ಮಾರುವ ಅಕ್ರಮ ಕಡಿಮೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಹೊರರಾಜ್ಯಗಳಿಗೆ ರಫ್ತು ಆಗುತ್ತಿದ್ದ ಸಿವಿಲ್ ಎಕ್ಸ್‌ಪೋರ್ಟ್ ತಿಂಗಳಿಗೆ 20–23 ಲಕ್ಷ ಲೀಟರ್‌ಗಳಿಂದ ಈಗ 4 ರಿಂದ 5 ಲಕ್ಷ ಲೀಟರ್‌ಗಳು ಪ್ರತಿ ತಿಂಗಳಿಗೆ ಇಳಿಮುಖವಾಗಿದ್ದರೂ ಸರ್ಕಾರಕ್ಕೆ ಬರಬೇಕಾಗಿರುವ ವರಮಾನ ತಿಂಗಳಿಗೆ 20 ರಿಂದ 30 ಲಕ್ಷ ಲೀಟರ್‌ಗಳಿಂದ ಈಗ ಎಂಭತ್ತು ಲಕ್ಷ ರೂ. ದಿಂದ 1 ಕೋಟಿ ರೂ.ಗಳಷ್ಟು ಹೆಚ್ಚಾಗಿದೆ. ರಫ್ತು ಶುಲ್ಕ ಹೆಚ್ಚಿರುವುದರಿಂದ ರಾಜ್ಯದಲ್ಲಿರುವ ಡಿಸ್ಟಿಲರಿಗಳು ಮುಚ್ಚುವ ಸಂಭವವಿದ್ದು ಹಾಗೂ ಅದರಿಂದ ಹಲವಾರು ನೌಕರರು ನಿರುದ್ಯೋಗಿಗಳಾಗುತ್ತಾರೆಂದು ಹೇಳುವುದು ಸರಿಯಲ್ಲ. ಅಂಕಿ ಅಂಶಗಳ ಪ್ರಕಾರ ಕಳೆದ ವರ್ಷ ಏಪ್ರಿಲ್ ನಿಂದ ನವೆಂಬರ್ ವರೆಗೆ ಹಾಗೂ ಈ ವರ್ಷ ಅದೇ ಅವಧಿಗೆ ಹೋಲಿಸಿ ನೋಡಿದಾಗ, ಮದ್ಯ ತಯಾರಿಕೆಯಲ್ಲಿ ಹೆಚ್ಚಿನ ಇಳಿತವೇನೂ ಇರುವುದಿಲ್ಲ. 1989–90 ರಲ್ಲಿ ಮದ್ಯ ತಯಾರಿಕೆಯು 262.76 ಲಕ್ಷ ಲೀಟರ್‌ಗಳಿದ್ದು ಈ ವರ್ಷ ಅದೇ ಅವಧಿಯಲ್ಲಿ 207.67 ಲಕ್ಷ ಲೀಟರ್‌ಗಳಾಗಿರುತ್ತವೆ. ರಾಜ್ಯದಲ್ಲಿ ಮದ್ಯ ಮಾರಾಟವು ಕಳೆದ ವರ್ಷ ಇದೇ ಅವಧಿಯಲ್ಲಿ 72.87 ಲಕ್ಷ ಲೀಟರ್‌ಗಳಿದ್ದು, ಅದು ಈ ವರ್ಷ ಇದೇ ಅವಧಿಯಲ್ಲಿ 107.47 ಲಕ್ಷ ಲೀಟರ್‌ಗಳಾಗಿರುತ್ತದೆ. ರಾಜ್ಯದ ಹೊರಗಿನ ಮಾರಾಟ ಕಳೆದ ವರ್ಷ 18.4 ಲಕ್ಷ ಲೀಟರ್‌ಗಳಿದ್ದು ಅದು ಈ ವರ್ಷ 8.4 ಲಕ್ಷ ಲೀಟರ್‌ಗಳಿಗೆ ಇಳಿದಿದೆ. ರಾಜ್ಯದ ಹೊರಗಿನ ರಫ್ತು ಇಳಿಮುಖವಾಗಿದ್ದರೂ ಐ.ಎಂ.ಎಲ್. ಬಾಬಿನಿಂದ (ರಾಜ್ಯದ ಒಳಗೆ ಹಾಗೂ ಹೊರಗೆ ಆಗಿರುವ ಮಾರಾಟದಿಂದ) ಆದಾಯ ಗಣನೀಯವಾಗಿ ಹೆಚ್ಚಿದೆ. 1989–90ರ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ವರಮಾನ 42.50 ಕೋಟಿಗಳಿಂದ ಈ ವರ್ಷ ಅದೇ ಅವಧಿಯಲ್ಲಿ ವರಮಾನವು 62.61 ಕೋಟಿ ರೂಪಾಯಿಗಳಷ್ಟು ಆಗಿರುತ್ತದೆ.

ಈ ಅಂಕಿಅಂಶಗಳಿಂದ ರಫ್ತು ಶುಲ್ಕ ಹೆಚ್ಚಳದಿಂದ ರಾಜ್ಯದಲ್ಲಿರುವ ಡಿಸ್ಟಿಲರಿಗಳು ಮುಚ್ಚಿ ಹಲವಾರು ನೌಕರರು ನಿರುದ್ಯೋಗಿಗಳಾಗುವ ಸಂಭವಕ್ಕೆ ಯಾವ ಆಧಾರವೂ ಇರುವುದಿಲ್ಲ. 10–12–1990 ರಿಂದ ಬೆಂಗಳೂರಿನ ಮೆ. ನಿರಾಯು ಡಿಸ್ಟಿಲರಿ ತನ್ನ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದಿರುವ ಕಾರಣ ಲೇ ಆಫ್ ಕೊಟ್ಟಿರುತ್ತದೆ. ಈ ಕ್ರಮಕ್ಕೂ ರಫ್ತು ಶುಲ್ಕ ಹೆಚ್ಚಳಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಸದರಿ